ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 2111/2025 ಸಿ. ಡಬ್ಲ್ಯೂ: 2 ಪಿ ಡಬ್ಲ್ಯೂ : 2**

ಸಾಕ್ಷಿಯ ಹೆಸರು : ಪ್ರವೀಣ ಬೊಮಲೇ

ತಂದೆಯ ಹೆಸರು : ಕಾಶಿನಾಥ.

ವಯಸ್ಸು : 31 ವರ್ಷ

ಉದ್ಯೋಗ : ಖಾಸಗಿ ಕೆಲಸ .

ವಾಸಸ್ಥಳ : ಲಕ್ಷ್ಮೇಶ್ವರ, ತಾ: ಲಕ್ಷ್ಮೇಶ್ವರ.

ದಿನಾಂಕ: 04/05/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ: ಸಸಅ ರವರಿಂದ

1. ಸಾಕ್ಷಿಯು ದಾಖಲೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು,ಸದರಿ ದಾಖಲೆಯನ್ನು ನಿಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 5 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿ: 26-06-2025 ರಂದು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯ ಶವಾಗಾರದಲ್ಲಿ ಮಾಡಿದ್ದೇನೆ. ಆ ಸಮಯದಲ್ಲಿ ನಾನು, ಚಾಸಾ 3 ಮತ್ತು ಪೋಲೀಸರು ಇದ್ದರು. ಪ್ರಕಾಶ ಗಣಪತಿ ಹುಲ್ ಬಜಾರ್ ನ ಶವ ಪಂಚನಾಮೆಯನ್ನು ಪೋಲೀಸರು ಬೆಳಿಗ್ಗೆ 08-15 ರಿಂದ 09-00 ಗಂಟೆಯವರೆಗೆ ಮಾಡಿದ್ದರು. ಸಮಯ ಶವ ಪಂಚನಾಮೆ ಕಾಲಕ್ಕೆ ತೆಗೆದ ಭಾವ ಚಿತ್ರದಲ್ಲಿ ನಾನು ಹಾಜರಿದ್ದು, ಸದರಿ ಭಾವ ಚಿತ್ರವನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದೆ.

2. ಸಾಕ್ಷಿ ಮತ್ತೊಂದು ದಾಖಲೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 3 ಬಿ ಎಂದು ಗುರುತಿಸಲಾಯಿತು. ಅಪಘಾತವಾದ ಮಾರನೇ ದಿನ ಅಪಘಾತ ಸ್ಥಳದಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಮತ್ತು ಚಾಸಾ 3 ಇದ್ದೇವು. ಪಂಚನಾಮೆಯ ಕಾಲಕ್ಕೆ ಬುಲೋರೋ ವಾಹನ ಮತ್ತು ಪಲ್ಸರ್ ಮೋಟಾರ್ ಸೈಕಲನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಆಗ ಸಮಯ 11-00 ರಿಂದ 12-00 ಆಗಿತ್ತು. ಮೂರು ಭಾವ ಚಿತ್ರಗಳಲ್ಲಿ ನಾನು ಇದ್ದು, ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದಿರುತ್ತಾರೆ. ಸದರಿ ಭಾವ ಚಿತ್ರಗಳನ್ನು ಒಟ್ಟಾಗಿ ನಿಪಿ. 4 ಎಂದು ಈಗಾಗಲೇ ಗುರುತಿಸಲಾಗಿದೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.